# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1677 (1937)

ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 24.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಎಷ್ಟು ಹಾಪ್‌ಕಾಮ್ಸ್ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮಳಿಗೆಗಳು ಮುಚ್ಚಲ್ಪಟ್ಟಿವೆ; (ಜಿಲ್ಲಾವಾರು ಮತ್ತು ಬೆಂಗಳೂರು ನಗರ ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಪ್‌ಕಾಮ್ಸ್ ಮಳಿಗೆಗಳ ಸಂಖ್ಯೆ 410. ಒಟ್ಟಾರೆಯಾಗಿ ಈವರೆಗೂ 147 ಮಳಿಗೆಗಳು ಮುಚ್ಚಲ್ಪಟ್ಟಿದ್ದು, ಕಳೆದ ಮೂರು ವರ್ಷಗಳಲ್ಲಿ 94 ಮಳಿಗೆಗಳು ಮುಚ್ಚಲ್ಪಟ್ಟಿವೆ. ಜಿಲ್ಲಾವಾರು ವಿವರ ಕೆಳಗಿನಂತಿದೆ:- |

| ಕ್ರ. ಸಂ. | ಹಾಪ್ ಕಾಮ್ಸ್ | ಹಾಲಿ ಕಾರ್ಯ ನಿರ್ವಹಿಸುತ್ತಿರುವ ಮಳಿಗೆಗಳ ಸಂಖ್ಯೆ | ಕಳೆದ ಮೂರು ವರ್ಷಗಳಲ್ಲಿ ಮುಚ್ಚಲ್ಪಟ್ಟ ಮಳಿಗೆಗಳ ಸಂಖ್ಯೆ |
|---|---|---|---|
| | **ಬೆಂಗಳೂರು ಹಾಪ್ ಕಾಮ್ಸ್** | | |
| 1 | ಅ) ಬೆಂಗಳೂರು ನಗರ | 170 | 43 |
| | ಆ) ಬೆಂಗಳೂರು ಗ್ರಾಮಾಂತರ | 0 | 0 |
| | ಇ) ರಾಮನಗರ | 0 | 0 |
| | ಈ) ಕೋಲಾರ | 8 | 4 |
| | ಉ) ಚಿಕ್ಕಬಳ್ಳಾಪುರ | 0 | 0 |
| | **ಒಟ್ಟು** | **178** | **47** |
| 2 | ಬಾಗಲಕೋಟೆ | 1 | 0 |
| 3 | ಬೆಳಗಾವಿ | 8 | 3 |
| 4 | ಬೀದರ್ | 2 | 0 |
| 5 | ಬಳ್ಳಾರಿ | 1 | 2 |
| 6 | ಚಾಮರಾಜನಗರ | 9 | 1 |
| 7 | ಚಿತ್ರದುರ್ಗ | 17 | 2 |
| 8 | ಚಿಕ್ಕಮಗಳೂರು | 2 | 0 |
| 9 | ದಾವಣಗೆರೆ | 9 | 0 |
| 10 | ಧಾರವಾಡ | 6 | 3 |
| 11 | ಗದಗ | 7 | 0 |
| 12 | ಹಾವೇರಿ | 1 | 0 |
| 13 | ಹಾಸನ | 8 | 1 |

| | | | |
|---|---|---|---|
| 14 | ಕಲಬುರಗಿ | 12 | 0 |
| 15 | ಕೊಡಗು | 3 | 0 |
| 16 | ಕೊಪ್ಪಳ | 9 | 0 |
| 17 | ಮಂಡ್ಯ | 13 | 3 |
| 18 | ಮೈಸೂರು | 30 | 16 |
| 19 | ದಕ್ಷಿಣ ಕನ್ನಡ & ಉಡುಪಿ | 17 | 3 |
| 20 | ರಾಯಚೂರು | 5 | 0 |
| 21 | ಶಿವಮೊಗ್ಗ | 37 | 1 |
| 22 | ಉತ್ತರ ಕನ್ನಡ | 12 | 1 |
| 23 | ತುಮಕೂರು | 15 | 3 |
| 24 | ವಿಜಯಪುರ | 8 | 8 |
| | **ಒಟ್ಟು** | **410** | **94** |

| | | |
|---|---|---|
| ಆ) | ಹಾಪ್‌ಕಾಮ್ಸ್ ಕೇಂದ್ರಗಳು ಮುಚ್ಚಲು ಕಾರಣಗಳೇನು; ಸಿಬ್ಬಂದಿ ಕೊರತೆ, ಮೂಲಸೌಕರ್ಯದ ಕೊರತೆ ಅಥವಾ ಖಾಸಗಿ ಆನ್‌ಲೈನ್ ಮಾರುಕಟ್ಟೆಗಳ ಪೈಪೋಟಿ ಇದಕ್ಕೆ ಕಾರಣವೇ: | ಹಾಪ್‌ಕಾಮ್ಸ್ ಕೇಂದ್ರಗಳು ಮುಚ್ಚಲು ಕಾರಣಗಳು ಕೆಳಕಂಡಂತಿವೆ:-<br>• ಜನಸಂದಣಿ ಇರದ ಪ್ರದೇಶಗಳಲ್ಲಿ ಹೆಚ್ಚು ವ್ಯಾಪಾರ ವಹಿವಾಟು ನಡೆಯದೇ ಇರುವುದರಿಂದ ಹಾಗೂ ಖಾಸಗಿಯವರು ರಸ್ತೆ ಬದಿಗಳಲ್ಲಿ/ಅಂಗಡಿಗಳಲ್ಲಿ ಹಣ್ಣು-ತರಕಾರಿ ಮಾರಾಟ ಮಾಡುತ್ತಿರುವುದರಿಂದ ವ್ಯಾಪಾರ ವಹಿವಾಟು ಕಡಿಮೆಯಾಗಿ ಮಳಿಗೆಗಳನ್ನು ಮುಚ್ಚಲಾಗಿದೆ.<br>• ಬೆಂಗಳೂರಿನ ಪ್ರತಿಷ್ಠಿತ ಮಾಲ್‌ಗಳು, ಖಾಸಗಿ ಆನ್ ಲೈನ್ ಮಾರುಕಟ್ಟೆಗಳಿಂದ ಪೈಪೋಟಿ ಉಂಟಾಗಿರುತ್ತದೆ.<br>• ಬೆಂಗಳೂರು/ಮೈಸೂರು ಹಾಗೂ ಇನ್ನಿತರೆ ಹಾಪ್‌ಮ್ಸ್ ನೌಕರರು ಹೆಚ್ಚಿನ ಪ್ರಮಾಣದಲ್ಲಿ ನಿವೃತ್ತಿ ಹೊಂದಿರುತ್ತಾರೆ. ಇದರಿಂದಾಗಿ ನೌಕರರ ಕೊರತೆ ಉಂಟಾಗಿ ಮಳಿಗೆಗಳನ್ನು ಮುಚ್ಚಲಾಗಿರುತ್ತದೆ.<br>• ರಸ್ತೆಯ ಅಗಲೀಕರಣ/ಮೆಟ್ರೋ ಕಾಮಗಾರಿಯಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ ಜೊತೆಗೆ ಇತರೆ ಜಿಲ್ಲೆಗಳಲ್ಲಿಯೂ ರಸ್ತೆಯ ಅಗಲೀಕರಣದಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ.<br>ಸಿಬ್ಬಂದಿ ಕೊರತೆ, ಮೂಲಸೌಕರ್ಯದ ಕೊರತೆ, ಖಾಸಗಿ ಆನ್ ಲೈನ್ ಮಾರುಕಟ್ಟೆಗಳ ಪೈಪೋಟಿಯೂ ಸೇರಿದಂತೆ ಹಾಪ್ ಕಾಮ್ಸ್ ಮಳಿಗೆಗಳನ್ನು ಮುಚ್ಚಲು ಕಾರಣಗಳಾಗಿವೆ. |
| ಇ) | ಹಾಪ್‌ಕಾಮ್ಸ್ ನಂಬಿದ್ದ ರೈತರು ಮತ್ತು ಸಾರ್ವಜನಿಕರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಗಮನಕ್ಕೆ ಬಂದಿದೆ |
| ಉ) | ಮುಚ್ಚಲ್ಪಟ್ಟಿರುವ ಹಾಪ್ ಕಾಮ್ಸ್ ಕೇಂದ್ರಗಳನ್ನು | ಮುಚ್ಚಲ್ಪಟ್ಟಿರುವ ಹಾಪ್‌ಕಾಮ್ಸ್ ಕೇಂದ್ರಗಳನ್ನು ಪುನರಾರಂಭಿಸಲು ಕೈಗೊಂಡಿರುವ ಕ್ರಮಗಳು |

| | | |
|---|---|---|
| | ಪುನರಾರಂಭಿಸಲು ಮತ್ತು ಈ ಸಂಸ್ಥೆಯನ್ನು ಆರ್ಥಿಕವಾಗಿ ಬಲಪಡಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು; | ಕೆಳಕಂಡಂತಿವೆ:-<br><br>1. ದುರಸ್ತಿಕಾರ್ಯಗಳ ಅಗತ್ಯತೆಯಿಂದ ಮುಚ್ಚಿರುವ ಮಳಿಗೆಗಳನ್ನು ನವೀಕರಣ ಮಾಡಲು ಕ್ರಮ ಕೈಗೊಂಡಿದೆ.<br><br>2. ರಸ್ತೆ ಅಗಲೀಕರಣದಿಂದಾಗಿ ಪ್ರಸ್ತುತ ಮುಚ್ಚಿರುವ ಹಾಪ್ ಕಾಮ್ಸ್ ಮಳಿಗೆಗಳನ್ನು ಜನಸಂದಣಿ ಇರುವ ಇತರೆ ಪ್ರದೇಶಗಳಲ್ಲಿ ತೆರೆಯಲು ಅನುಮತಿಗಾಗಿ ಮಹಾನಗರ ಪಾಲಿಕೆ/ನಗರಸಭೆ/ಜಿಲ್ಲಾಧಿಕಾರಿಗಳ ಕಛೇರಿಯೊಂದಿಗೆ ವ್ಯವಹರಿಸಲಾಗುತ್ತಿದೆ.<br><br>3. ಹಾಲಿ ಇರುವ ಮಾರಾಟ ಮಳಿಗೆಗಳನ್ನು ಆಧುನೀಕರಿಸಿ ಮತ್ತು ಅಲ್ಲಿನ ಬಡಾವಣೆ ನಿವಾಸಿಗಳಿಗೆ ರೈತರ ಉತ್ಪನ್ನಗಳನ್ನು ಖರೀದಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ.<br><br>4. ಮುಚ್ಚಿರುವ ಹಲವು ಮಳಿಗೆಗಳಲ್ಲಿ ಹಣ್ಣಿನ ರಸಗಳ ಮಾರಾಟ ಮತ್ತು ಇತರೆ ಕೃಷಿ ಉತ್ಪನ್ನಗಳಾದ ಸಿರಿ ಧಾನ್ಯಗಳು ವಿವಿಧ ಕಾಳುಗಳು, ಎಣ್ಣೆಗಳನ್ನು ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಹಾಪ್‌ಕಾಮ್ಸ್ ಸಂಸ್ಥೆಯನ್ನು ಆರ್ಥಿಕವಾಗಿ ಬಲಪಡಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳು ಈ ಕೆಳಗಿನಂತಿವೆ:-<br><br>1. ಬೆಂಗಳೂರು ಹಾಪ್‌ಕಾಮ್ಸ್ ಸಂಸ್ಥೆಯ ವಹಿವಾಟಿನ ಅಭಿವೃದ್ಧಿಗಾಗಿ 2024-25 ನೇ ಸಾಲಿನಲ್ಲಿ ರೂ.15 ಕೋಟಿಗಳ ದುಡಿಯುವ ಬಂಡವಾಳ ನೀಡಲಾಗಿರುತ್ತದೆ.<br><br>2. ಹಣ್ಣು ಮತ್ತು ತರಕಾರಿಗಳನ್ನು ಸರಬರಾಜು ಮಾಡಲು ಜಿಲ್ಲಾ ಹಾಪ್‌ಕಾಮ್ಸ್‌ಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ/885/ವೆಚ್ಚ-12/2025 ದಿನಾಂಕ:23.10.2025 ರನ್ವಯ 4ಜಿ ವಿನಾಯಿತಿ ದೊರಕಿದ್ದು, ರಾಜ್ಯದಲ್ಲಿನ ಸರ್ಕಾರಿ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಕೇಂದ್ರ ಕಾರಾಗೃಹ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವಸತಿ ನಿಲಯಗಳಿಗೆ, ವಸತಿ ಶಾಲೆಗಳಿಗೆ, ಆಶ್ರಮ ಶಾಲೆಗಳಿಗೆ, ಮೊರಾರ್ಜಿ ದೇಸಾಯಿ ವಸತಿ ನಿಲಯಗಳಿಗೆ, ಸರ್ಕಾರದ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ, ಆಸ್ಪತ್ರೆಗಳಿಗೆ ಇತ್ಯಾದಿ) ವಿವಿಧ ಜಿಲ್ಲಾ ಹಾಪ್‌ಕಾಮ್ಸ್‌ಗಳ ಮುಖೇನ ಹಣ್ಣು ಮತ್ತು ತರಕಾರಿಗಳನ್ನು ಪೂರೈಸುತ್ತಿದ್ದು, ಹಾಪ್‌ಕಾಮ್ಸ್‌ಗಳ ಲಾಭದಾಯಕತೆ ಮತ್ತು ಆರ್ಥಿಕ ಸುಧಾರಣೆಗೆ ಸಹಾಯಕವಾಗಿರುತ್ತದೆ.<br><br>3. ಹಾಪ್‌ಕಾಮ್ಸ್‌ಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ (ಹಣ್ಣು ಮತ್ತು ತರಕಾರಿಗಳ ಮಾರಾಟ ಮಳಿಗೆಗಳು/ಸಂಗ್ರಹಣಾ ಕೇಂದ್ರ/ಶೀಥಲಗೃಹ/ಹಣ್ಣು |

| | | |
|---|---|---|
| | | ಮಾಗಿಸುವ ಘಟಕ/ಪ್ಯಾಕ್ ಹೌಸ್ ಇತ್ಯಾದಿ), ಹಣ್ಣು ಮತ್ತು ತರಕಾರಿಗಳ ಸಾಗಣೆಗೆ ಮೊಬೈಲ್ ವ್ಯಾನುಗಳ ಖರೀದಿಗಾಗಿ, ಸ್ಪಾಟ್ ಬಿಲ್ಲಿಂಗ್ ಮಿಷನ್‌ಗಳ ಖರೀದಿ ಇತ್ಯಾದಿ ಘಟಕಗಳಿಗೆ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರೂ.55.20 ಕೋಟಿ ಅನುದಾನವನ್ನು ಹಾಪ್‌ಕಾಮ್ಸ್‌ಗಳಿಗೆ ಒದಗಿಸಲಾಗಿರುತ್ತದೆ (2008-09 ರಿಂದ 2025-26ನೇ ಸಾಲಿನವರೆಗೆ). |
| ಊ) | ಹಾಪ್‌ಕಾಮ್ಸ್ ಮೂಲಕ ಮನೆಬಾಗಿಲಿಗೆ ತರಕಾರಿ ತಲುಪಿಸುವ ಯೋಜನೆ ಅಥವಾ ಮೊಬೈಲ್ ವ್ಯಾನ್ ಸೌಲಭ್ಯಗಳನ್ನು ರಾಜ್ಯಾದ್ಯಂತ ವಿಸ್ತರಿಸುವ ಉದ್ದೇಶ ಸರ್ಕಾರದ ಮುಂದಿದೆಯೇ? | ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯಿಂದ ನಗರದ ಅಪಾರ್ಟ್‌ಮೆಂಟ್‌ಗಳಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಸಂಚಾರಿ ವಾಹನಗಳ ಮೂಲಕ ಮಾರಾಟ ಮಾಡಲು ಕ್ರಮವಹಿಸಿದೆ. ಮಂಗಳೂರು ಜಿಲ್ಲಾ ಹಾಪ್‌ಕಾಮ್ಸ್‌ನಲ್ಲಿ ಆನ್ ಲೈನ್ ಮೂಲಕ ಹಣ್ಣು ಮತ್ತು ತರಕಾರಿಗಳ ಮಾರಾಟವನ್ನು ಸಣ್ಣ ಮಟ್ಟದಲ್ಲಿ ಪ್ರಾರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಉಳಿದ ಹಾಪ್‌ಕಾಮ್ಸ್‌ಗಳಲ್ಲಿಯೂ ಆನ್ ಲೈನ್ ಮೂಲಕ ಹಣ್ಣು ತರಕಾರಿಗಳ ಮಾರಾಟ ನಡೆಸಲು ಉದ್ದೇಶಿಸಲಾಗಿದೆ. |

ಸಂಖ್ಯೆ: HORTI 165 HGM 2026

**(ಎಸ್. ಎಸ್. ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು